ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 48-59
©*IIMRD*, Mysuru

IIMRD JOURNALS
www.iimrd.com

# ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮತೋಲನೆ

**ಶ್ರೀ ಯಮನಪ್ಪ ತಂದೆ ಬಸಪ್ಪ ಮತ್ತು ಡಾ. ಎಸ್.ಎ. ಗೋವರ್ಧನ**
ಸಂಶೋಧನಾ ವಿದ್ಯಾರ್ಥಿ[1], ಸಹಾಯಕ ಪ್ರಾಧ್ಯಾಪಕರು[2]
ಗ್ರಾಮೀಣಾಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ ದೇವದುರ್ಗ

**ಸಾರಾಂಶ: (Abstract)**

*ಅಭಿವೃದ್ಧಿ ಆರ್ಥಿಕ ಚಟುವಟಿಕೆಗೆ ಮಾತ್ರ ಸೀಮಿತವಾಗಿತ್ತು. ಅಭಿವೃದ್ಧಿಯನ್ನು ಆರ್ಥಿಕ ಬೆಳವಣಿಗೆ ಅಥವಾ ಸಾಮಾಜಿಕ ಪ್ರಗತಿ ಎಂದು ತಿಳಿಯಲಾಗುತ್ತದೆ. ಉತ್ಪಾದನೆಯನ್ನು ಹೆಚ್ಚಿಸದೆ ಸರಕು ಅಥವಾ ಸೇವೆಗಳಿಗೆ ಜನಸಂಖ್ಯೆಯ ಬೇಡಿಕೆಯನ್ನು ಉಳಿಸಿಕೊಳ್ಳುವುದು ಅಸಾಧ್ಯ ಸ್ಥೂಲ ಅರ್ಥಿಕ ವ್ಯವಸ್ಥೆಯ ನಿರಂತರ ಬೆಳವಣಿಗೆಗೆ ಇದು ಮುಖ್ಯ ಕಾರಣವಾಗಿದೆ. ಆರ್ಥಿಕ ಕ್ಷೇತ್ರದಿಂದ ಉತ್ಪಾದನೆ ಹೆಚ್ಚಿಸಿ ವರಮಾನವನ್ನು ವೃದ್ಧಿಸಿದರೆ, ರಾಜ್ಯದ ವರಮಾನವನ್ನು ದ್ವಿಗುಣಗೊಳಿಸಿದರೆ ದೇಶ, ರಾಷ್ಟ್ರ ಅಭಿವೃದ್ಧಿ ಹೊಂದುತ್ತದೆ ಎಂಬ ಭ್ರಮೆ ಆವರಿಸಿಕೊಂಡಿತ್ತು. ಆರ್ಥಿಕ ಚಟುವಟಿಕೆಗಳಿಗಿಂತ ಭಿನ್ನವಾದ ಸಮಸ್ಯೆಗಳಿಂದಾಗಿ ಅಭಿವೃದ್ಧಿ ಕುಂಠಿತವಾಗುವುದನ್ನು 1990 ರ ನಂತರ ವ್ಯಾಪಕ ಚರ್ಚೆಗೆ ಒಳಗಾಯಿತು. ಜ್ಞಾನವು ಸಂಗ್ರಹವಾಗುತ್ತಿದ್ದಂತೆ ಮತ್ತು ಹೊಸ ತಂತ್ರಜ್ಞಾನಗಳು ಸೃಷ್ಟಿಯಾಗುತ್ತಿದ್ದಂತೆ ಸಾಮಾಜಿಕ ಅಭಿವೃದ್ಧಿಯೂ ಸಂಭವಿಸುತ್ತದೆ, ಜನರು ತಮ್ಮ ಸಾಮರ್ಥ್ಯವನ್ನು ಮತ್ತು ಅಭಿವೃದ್ಧಿಪಡಿಸುವ ಮಾನವ ಅಗತ್ಯವನ್ನು ಪೂರೈಸಲು ಹೆಚ್ಚಿನ ಅವಕಾಶಗಳನ್ನು ಪಡೆಯುತ್ತಾರೆ, ಈ ಅಂಶವಿಲ್ಲದೇ ಪ್ರಪಂಚದ ಸುಧಾರಣೆಯಾಗಿಸುವುದು ಅಸಾಧ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮತೋಲನೆ ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** *ಆರ್ಥಿಕ ಅಭಿವೃದ್ಧಿ, ಆರ್ಥಿಕ ಬೆಳವಣಿಗೆ, ಸಾಮಾಜಿಕ, ಪ್ರಾದೇಶಿಕ ಅಸಮತೋಲನೆ.*

## ಪೀಠಿಕೆ

ಮಾನವ ಅಭಿವೃದ್ಧಿ ಎಂಬ ಪರಿಭಾವನೆ ಪ್ರಸ್ತುತ ಸಂದರ್ಭದಲ್ಲಿ, ವಿಶ್ವದಲ್ಲಿ ಹಾಗೂ ರಾಷ್ಟ್ರಗಳ ಮಟ್ಟದಲ್ಲಿ ವ್ಯಾಪಕವಾದ, ಚರ್ಚೆಗೆ ಒಳಗಾಗಿರುವ ಬಹುದೊಡ್ಡ ಅಭಿವೃದ್ಧಿಯ ಪರಿಕಲ್ಪನೆಯಾಗಿದೆ. ಅಭಿವೃದ್ಧಿಯ ಬಹುಮುಖ್ಯ ಉದ್ದೇಶ ಮಾನವನ ಬದುಕಿನ ಆಯ್ಕೆಗಳ ವ್ಯಾಪ್ತಿಯನ್ನು ವರ್ಧಿಸುವುದಾಗಿದೆ. ಜನತೆ ಸುಖಕರವಾಗಿ, ದೃಢಕಾಯರಾಗಿ, ಆರೋಗ್ಯವಾಗಿ ಬಹುಕಾಲ ಉಳಿಯುವಂತಹ ವಾತಾವರಣವನ್ನು ನಿರ್ಮಿಸುವುದು ಅಭಿವೃದ್ಧಿಯ ಗುರಿಯಾಗಿದೆ."

*Please cite this article as:* ಶ್ರೀ ಯಮನಪ್ಪ ತಂದೆ ಬಸಪ್ಪ ಮತ್ತು ಎಸ್.ಎ. ಗೋವರ್ಧನ. (2025). ಅಭಿವೃದ್ಧಿ ಮತ್ತು ಪ್ರಾದೇಶಿಕ ಅಸಮತೋಲನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 48–59

**ಪ್ರಾದೇಶಿಕ ಅಸಮಾತೋಲನೆಯ ಸ್ವರೂಪ**

ಪ್ರಾದೇಶಿಕ ಅಸಮಾನತೆಯು ಭೌಗೋಳಿಕ ಪ್ರದೇಶಗಳಲ್ಲಿ ಆದಾಯ ಮತ್ತು ಸಂಪನ್ಮೂಲಗಳ ಅಸಮಾನ ಹಂಚಿಕೆಯನ್ನು ಸೂಚಿಸುತ್ತದೆ. ಮೂಲಸೌಕರ್ಯ, ಭೌಗೋಳಿಕ ವೈಶಿಷ್ಟ್ಯಗಳು (ಪರ್ವತಗಳು, ಕರಾವಳಿಗಳು ನಿರ್ದಿಷ್ಟ ಹವಾಮಾನಗಳು, ಇತ್ಯಾದಿ) ಮತ್ತು ಒಟ್ಟುಗೂಡಿಸುವಿಕೆಯ ಆರ್ಥಿಕತೆಗಳಲ್ಲಿನ ಸ್ಥಳೀಯ ವ್ಯತ್ಯಾಸಗಳಿಗೆ ಕಾರಣವಾಗಿದೆ, ಅಂತಹ ಅಸಮಾನತೆಯು ಆರ್ಥಿಕ ಅಸಮಾನತೆಯ ಬಗ್ಗೆ ಸಾರ್ವಜನಿಕ ನೀತಿ ಚರ್ಚೆಗಳಲ್ಲಿ ಕೇಂದ್ರವಾಗಿದೆ. ನಗರ ಪ್ರದೇಶಗಳಲ್ಲಿ ನೆಲೆಗೊಂಡಿರುವ ಉದ್ಯೋಗಗಳು ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚಿನ ನಾಮಮಾತ್ರದ ವೇತನವನ್ನು (ಬೆಲೆ ಮಟ್ಟಗಳು ಅಥವಾ ಹಣದುಬ್ಬರದಲ್ಲಿನ ವ್ಯತ್ಯಾಸಗಳಿಗೆ ಸರಿ ಹೊಂದಿಸದ) ಹೊಂದಿದ್ದರೂ, ಜೀವನ ವೆಚ್ಚ ಮತ್ತು ಕೌಶಲ್ಯಪೂರ್ಣ ಕಲಸದ ಲಭ್ಯತೆಯು ನೈಜ ಆದಾಯ ಮತ್ತು ಉತ್ಪಾದನೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿಗೆ ಸಂಬಂಧಿಸಿರುತ್ತದೆ. ಹೆಚ್ಚುವರಿಯಾಗಿ, ಸಾರ್ವಜನಿಕ ಮೂಲಸೌಕರ್ಯದ ಪ್ರಾದೇಶಿಕ ಘಟಕವು ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣದ ಪ್ರವೇಶದ ಮೇಲೆ ಪರಿಣಾಮ ಬೀರುತ್ತದೆ. ನೈಸರ್ಗಿಕ ಸಂಪನ್ಮೂಲ ಸಂಯೋಜನೆ ಮತ್ತು ಪ್ರಾದೇಶಿಕ ಮೂಲಸೌಕರ್ಯದ ಗುಣಮಟ್ಟ ಎರಡರಲ್ಲೂ ವ್ಯತ್ಯಾಸವನ್ನು ಸಾಂಪ್ರದಾಯಿಕವಾಗಿ ನಗರಗಳು ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ವಲಸೆ ಮಾದರಿಗಳಿಗೆ ಪ್ರೇರೇಪಿಸುವ ಅಂಶಗಳೆಂದು ಪರಿಗಣಿಸಲಾಗುತ್ತದೆ. ಇದು ಪ್ರತಿಯಾಗಿ, ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಕೈಗಾರಿಕೆಗಳು ಮತ್ತು ವಲಯಗಳ ಕೇಂದ್ರೀಕರಣದ ಮೇಲೆ ಪರಿಣಾಮ ಬೀರುತ್ತದೆ, ಹಾಗೆಯೇ ಸ್ಥಳೀಯ ಸರ್ಕಾರಗಳು ಮಾಡಿದ ಹೂಡಿಕೆ ಆಯ್ಕೆಗಳು, ಹೀಗೆ ಪ್ರಾದೇಶಿಕ–ಆಧಾರಿತ ಅಸಮಾನತೆಗಳನ್ನು ಶಾಶ್ವತಗೊಳಿಸುತ್ತದೆ.

ಅಭಿಜಾತ ಅರ್ಥಶಾಸ್ತ್ರಜ್ಞರ ಪ್ರಕಾರ ಉತ್ಪಾದನಾಂಗಗಳು ಸಂಪೂರ್ಣವಾಗಿ ಅನಿರ್ಬಧಿತವಾಗಿ ಸಂಚಲನೆಯಲ್ಲಿದ್ದಾಗ ಹಾಗೂ ಆರ್ಥಿಕತಯ ಸ್ವಯಂಚಾಲಿತ ಕಾರ್ಯಾಚರಣೆಯಿಂದಾಗಿ ಪ್ರಾದೇಶಿಕ ಅಸಮಾನತೆಯೆಂಬುದು ಉಂಟಾಗಲು ಸಾಧ್ಯವೇ ಇಲ್ಲ, ಎಸ್.ಸಿ.ಪಾಟ್ನಾಯಕ್ (1981:1) ಪ್ರಕಾರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರಮ ಶಕ್ತಿಯು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಚಲಿಸಬಹುದು. ಉದ್ಯೋಗದ ಅವಕಾಶಗಳು ಹಾಗೂ ದುಡಿಮೆಯ ಪ್ರಮಾಣ ಎಲ್ಲಿ ಅಧಿಕವಾಗಿರುತ್ತದೋ ಅಂಥ ಪ್ರದೇಶಗಳಿಗೆ ಶ್ರಮಶಕ್ತಿಯು ವಲಸೆ ಹೋಗುವುದು ಸಾಮಾನ್ಯ, ದೀರ್ಘಾವಧಿಯಲ್ಲಿ ಬದಲಾವಣೆಗಳು ಸಮಸ್ಥಿತಿಗೆ ಸಮತೋಲನ ಸಾಧ್ಯವಾಗುತ್ತದೆ. ಆದ್ದರಿಂದ ಅವರ ಪ್ರಕಾರ ಪ್ರಾದೇಶಿಕ ಅಸಮತೋಲನವೆನ್ನುವುದು ತಾತ್ಕಾಲಿಕವಾದ ಒಂದು ಸಮಸ್ಯೆಯಾಗಿದೆ. ನವ ಅಥವಾ ಅರ್ಥಶಾಸ್ತ್ರದ ಪ್ರಕಾರ ವಿಕೃತ ಕಾರ್ಯಾಚರಣೆಯಿಂದಾಗಿ ಪ್ರಾದೇಶಿಕ ಅಸಮತೋಲನ ಉಂಟಾಗುತ್ತವೆ. ಈ ಬಗೆಯ ವಿಕೃತಿಗಳಿಗೆ ಮಾರುಕಟ್ಟೆ ದೋಷಗಳು ಹಾಗೂ ಸಾಂಸ್ಥಿಕ ಬಿಕ್ಕಟ್ಟುಗಳೇ ಕಾರಣಗಳಾಗಿವೆ. ಏಕೆಂದರೆ ಈ ದೋಷಗಳು ಹಾಗೂ ಬಿಕ್ಕಟ್ಟುಗಳು ಸಂಪನ್ಮೂಲಗಳ ಸಂಚಲನೆಗೆ ತೊಡಕನ್ನು ಉಂಟು ಮಾಡುತ್ತವೆ. ಇದರಿಂದ ಅಸಮತೋಲನ ಉಂಟಾಗುತ್ತದೆ. ಮಾರುಕಟ್ಟೆಗಳು ಪರಿಪೂರ್ಣ ಸ್ಥಿತಿ ತಲುಪಿದ ಹಾಗೆ ಹಾಗೂ ಸಾಂಸ್ಥಿಕ ವ್ಯವಸ್ಥೆಯು ಪರಿಪೂರ್ಣಗೊಂಡಾಗ ಪ್ರಾದೇಶಿಕ ಸಮಾನತೆ ಸಾಧ್ಯವಾಗುತ್ತದೆ ಎಂಬುದು ನವಅಭಿಜಾತ ಅರ್ಥಶಾಸ್ತ್ರಜ್ಞರ ಧೋರಣೆಯಾಗಿದೆ. ಕೆಲವು ಲೊಕೇಶನ್ ಸಿದ್ಧಾಂತಗಳ ನಿಲುವೂ ಇದೇ

ಆಗಿದೆ. ಪ್ರಾದೇಶಿಕ ಅಸಮಾನತೆಯನ್ನು ಸಂಹರಿಸಿಕೊಳ್ಳುವ ದಿಶೆಯಲ್ಲಿ ಅಭಿಜಾತ ಹಾಗೂ ನವ ಅಭಿಜಾತ್ರ ಆರ್ಥಿಕ ಸಿದ್ಧಾಂತಗಳು ಹೆಚ್ಚು ಉಪಯುಕ್ತವಾಗಿಲ್ಲ.

ಅಭಿವೃದ್ಧಿಯ ಮೂಲದಲ್ಲೇ ಪ್ರಾದೇಶಿಕ ಅಸಮಾನತೆ ಅಂತರ್ಗತಗೊಂಡಿದೆ ಎಂಬ ಬೀಜ ಸಿದ್ಧಾಂತವನ್ನು 'ಬೆಳವಣಿಗೆ ಧ್ರುವ' ಎಂಬ ಸಿದ್ಧಾಂತಕ್ಕೆ ಒಯ್ಯಬಹುದಾಗಿದೆ. ಇದನ್ನು ರೂಪಿಸಿದವರು ಫ್ರಾನ್ಸ್ ದೇಶದ ಫೆರೋಕ್ಸ್ ಮತ್ತು ಬೋರವಿಲ್ಲೆ. ಎಫ್. ಫೆರೋಕ್ಸ್‌ನು 1955ರಲ್ಲಿ 'ಅಭಿವೃದ್ಧಿ ಧ್ರುವಗಳು' ಎಂಬ ಪರಿಭಾವನೆಯನ್ನು ರೂಪಿಸಿದ. ಇದರ ಮೂಲಕ ಪ್ರಾದೇಶಿಕ ಅಸಮಾನತೆಯನ್ನು ಗುರುತಿಸುವುದು ಸುಲಭವಾಯಿತು. ಅವರ ಪ್ರಕಾರ ಅಭಿವೃದ್ಧಿಯೆನ್ನುವುದು ಎಲ್ಲ ಪ್ರದೇಶದಲ್ಲೂ ಚಿಗುರೊಡೆಯುವುದಿಲ್ಲ. ಅದು ಕೆಲವು ನಿರ್ದಿಷ್ಟ ಧ್ರುವಗಳಲ್ಲಿ ಒಡಮೂಡುತ್ತದೆ. ತದನಂತರ ಅದು ಹರಡಲು ತೊಡಗುತ್ತದೆ. ಸ್ವಲ್ಪ ಕಾಲಾನಂತರ ಅದು ಇಡೀ ಆರ್ಥಿಕತೆಯನ್ನು ವ್ಯಾಪಿಸುತ್ತದೆ. ಇದನ್ನು ಮುಂದುವರಿಸಿದ ಬೋದವಿಲ್ಲೆಯು ಧ್ರುವಗಳಲ್ಲಿ ಅಭಿವೃದ್ಧಿಯು ಮಡುಗಟ್ಟಿಕೊಳ್ಳುವ ಬಗೆಯನ್ನು ಕುರಿತಂತೆ ನಿರ್ಣಾಯಕವಾದ ಕೆಲವು ವಿಚಾರಗಳನ್ನು ಬೆಳೆಸಿದ" (ಶೇಷಾದ್ರಿ, 1994 ಪು. 46), ಅಭಿವೃದ್ಧಿ ಧ್ರುವಗಳು ಹೇಗೆ ರೂಪಗೊಳ್ಳುತ್ತವೆ ಎಂಬುದರ ಬಗೆಗೆ ಇವರಿಬ್ಬರ ಸಿದ್ಧಾಂತಗಳು ಪ್ರಾದೇಶಿಕ ಅಸಮಾನತೆ ಎನ್ನುವುದು ಅಭಿವೃದ್ಧಿಯ ಮೂಲದಲ್ಲಿ ಅಂತರ್ಗತಗೊಂಡಿದೆ ಎಂಬ ಸಂಗತಿ ಅತ್ಯಂತ ಸ್ಪಷ್ಟವಾಗಿವೆ.

**ಪ್ರಾದೇಶಿಕ ಅಸಮತೋಲನದ ಕಾರಣಗಳು**

**ಭೌತಿಕ ಅಂಶಗಳು**

ಇಲ್ಲಿ ಪ್ರಮುಖವಾಗಿ ನೈಸರ್ಗಿಕ ಸಂಪನ್ಮೂಲಗಳಾದ ವಾತಾವರಣ, ಖನಿಜ ಸಂಪತ್ತು, ಮಣ್ಣು, ಮಣ್ಣಿನ ಫಲವತ್ತತೆ, ಜಲಸಂಪನ್ಮೂಲದ ಲಭ್ಯತೆ, ಭೌಗೋಳಿಕವಾದ ಎತ್ತರದ ಪ್ರದೇಶ ಮತ್ತು ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ ಇತ್ಯಾದಿಗಳನ್ನು ಗುರುತಿಸಲಾಗಿದೆ.

**ಭೌತಿಕೇತರ ಅಂಶಗಳು**

ಇಲ್ಲಿ ಪ್ರಮುಖವಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಐತಿಹಾಸಿಕ, ರಾಜಕೀಯ, ಜನಸಂಖ್ಯೆ, ಕ್ರಿಯಾತ್ಮಕ ಮತ್ತು ತಾಂತ್ರಿಕ ಅಂಶಗಳನ್ನು ಗುರುತಿಸಲಾಗಿದೆ. ಇಂತಹ ಎರಡು ಪ್ರದೇಶಗಳಲ್ಲಿ (ಉತ್ತರ ಮತ್ತು ದಕ್ಷಿಣ ಭಾಗಗಳು) ಪ್ರಾದೇಶಿಕ ಸಮತೋಲನೆಯನ್ನು ತರಬೇಕಾದರೆ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ವಿವಿಧ ಸೇವಾ ಕ್ಷೇತ್ರಗಳಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಘ–ಸಂಸ್ಥೆಗಳು ವಿಶೇಷ ಪ್ಯಾಕೇಜ್‌ಗಳ ಮೂಲಕ ವಲಯವಾರು ಮತ್ತು ಪ್ರದೇಶವಾರು ಯೋಜನೆ ಹಾಗೂ ಬಂಡವಾಳ ಹೂಡಿಕೆ ಮಾಡುವಂತೆ ಪ್ರೋತ್ಸಾಹಿಸುವ ಮೂಲಕ ಆ ಪ್ರದೇಶಗಳಲ್ಲಿನ ಅಭಿವೃದ್ಧಿಗೆ ಪೂರಕವಾದ ವಿವಿಧ ಸೇವಾ ಕ್ಷೇತ್ರಗಳಾದ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಸಣ್ಣ–ಅತಿಸಣ್ಣ ಮತ್ತು ಬೃಹತ್ ಕೈಗಾರಿಕೆಗಳ ಸ್ಥಾಪನೆ, ಆರೋಗ್ಯ ಮತ್ತು ನೈರ್ಮಲ್ಯ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ನೀರಾವರಿ ಯೋಜನೆಗಳ ಅನುಷ್ಠಾನ, ಕೃಷಿ ಮತ್ತು ತೋಟಗಾರಿಕೆಗೆ ಉತ್ತೇಜನ ಹಾಗೂ ಹೆಚ್ಚು ಹೆಚ್ಚು ಉದ್ಯೋಗಗಳ ಸೃಷ್ಟಿ ಇತ್ಯಾದಿ ಕ್ಷೇತ್ರಗಳ ಮೇಲೆ ಬಂಡವಾಳ ಹೂಡಿಕೆ ಮಾಡಿದಾಗ ಅಭಿವೃದ್ಧಿಯುಂಟಾಗಿ

ಪ್ರಾದೇಶಿಕ ಅಸಮತೋಲನವನ್ನು ಭಾಗಶಃ ಅಥವಾ ಪೂರ್ಣಪ್ರಮಾಣದಲ್ಲಿ ಕಡಿಮೆಗೊಳಿಸಿ ಸಮತೋಲನವನ್ನು ಸಾಧಿಸಬಹುದಾಗಿದೆ.

**ಪ್ರಾದೇಶಿಕ ಅಸಮತೋಲನೆಗೆ ಸಂಬಂಧಿಸಿದ ಸಿದ್ಧಾಂತಗಳು**

ಪ್ರಾದೇಶಿಕ ಅಸಮತೋಲನೆಗೆ ಸಂಬಂಧಿಸಿದಂತೆ ಅನೇಕ ಸಿದ್ಧಾಂತಗಳು ಅಸ್ತಿತ್ವದಲ್ಲಿರುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಮಾರ್ಕ್ಸ್ ಸಿದ್ಧಾಂತ, ಶಾಸ್ತ್ರೀಯ ಸಿದ್ಧಾಂತ, ನವಶಾಸ್ತ್ರೀಯ ಹಿಮ್ಮುಖವಾದ ಮತ್ತು ಚದುರುವಿಕೆಯ ಪ್ರಾದೇಶಿಕ ಪ್ರಗತಿ ಸಿದ್ಧಾಂತ, ನವಶಾಸ್ತ್ರೀಯ ಪ್ರಾದೇಶಿಕ ಅಭಿವೃದ್ಧಿ ಸಿದ್ಧಾಂತ

ಪ್ರಾದೇಶಿಕ ಸಂಪನ್ಮೂಲಗಳು ರಾಷ್ಟ್ರೀಯ ಆರ್ಥಿಕ ಪ್ರಗತಿಗೆ ಹಂಚಿಕೆಯಾದಾಗ ಮತ್ತು ಬಂಡವಾಳಶಾಹಿಗಳ ಸ್ಥಳೀಯ ಪ್ರದೇಶಗಳ ಮೇಲೆ ಬಂಡವಾಳ ಹೂಡಲು ಆಸಕ್ತಿ ತೋರಿದಾಗ ಪ್ರಾದೇಶಿಕ ಅಸಮತೋಲನವನ್ನು ಸರಿದೂಗಿಸಬಹುದು ಎಂದು ಮಾರ್ಕ್ಸ್ ಸಿದ್ಧಾಂತ ಹೇಳುತ್ತದೆ.

ಶಾಸ್ತ್ರೀಯ ಸಿದ್ಧಾಂತದಲ್ಲಿ ಸಂಪ್ರದಾಯಗಳು ಹೆಚ್ಚು ಹೊಣೆಗಾರಿಕೆಯನ್ನು ಮತ್ತು ಅಭಿವೃದ್ಧಿಗೆ ಹೆಚ್ಚು ತೊಡಕುಗಳನ್ನು ನೀಡುತ್ತಿದ್ದು, ಇವುಗಳ ನಿವಾರಣೆಯಿಂದ ಮಾತ್ರ ಪ್ರಾದೇಶಿಕ ಸಮತೋಲನ ಸಾಧ್ಯವೆಂದು ಹೇಳುತ್ತಾ ಇವುಗಳನ್ನು ಹೋಗಲಾಡಿಸಲು ಚಾರಿತ್ರಿಕವಾಗಿ ಶಿಕ್ಷಣ ಪಸರಿಸುವಿಕೆಯಿಂದ ಸಾಧ್ಯವೆಂದು ತಿಳಿಸುತ್ತಾರೆ.

ನವಶಾಸ್ತ್ರೀಯ ಸಿದ್ಧಾಂತವು ಪ್ರಾದೇಶಿಕ ಬೆಳವಣಿಗೆಯ ಅಧ್ಯಯನದಲ್ಲಿ ಪ್ರಮುಖವಾಗಿ ಎರಡು ಪರಿಣಾಮಗಳನ್ನು ಉಲ್ಲೇಖಿಸಿದ್ದಾರೆ. ಅವುಗಳೆಂದರೆ–ಹಿಮ್ಮುಖವಾದ ಮತ್ತು ಚದುರುವಿಕೆವಾದ. ಮೊದಲನೆಯದಾಗಿ, ಹಿಮ್ಮುಖವಾದದ ಪ್ರಕಾರ ಮಾರುಕಟ್ಟೆ ಬಲದಿಂದ ತಲಾದಾಯ ಹೆಚ್ಚಾಗುತ್ತದೆ. ಎರಡನೇಯದಾಗಿ ಚದುರುವಿಕೆವಾದದ ಪ್ರಕಾರ ತಲಾದಾಯ ಹೆಚ್ಚಾಗುತ್ತದೆ. ತಲಾದಾಯ ಹೆಚ್ಚಾದಂತೆ ಬಡತನ ಪ್ರಮಾಣ ಕಡಿಮೆಯಾಗುತ್ತದೆ ಎಂದು ವಿವರಿಸಿದ್ದಾರೆ. ಈ ಎರಡನ್ನು ಸಮಾನವಾಗಿ ನೋಡಿಕೊಂಡು ಹೋಗುವುದರಿಂದ ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಬಹುದಾಗಿದೆ ಎಂದು ಈ ಸಿದ್ಧಾಂತ ಸ್ಪಷ್ಟಪಡಿಸಿದೆ.

ನವಶಾಸ್ತ್ರೀಯ ಪ್ರಾದೇಶಿಕ ಅಭಿವೃದ್ಧಿ ಸಿದ್ಧಾಂತವು ಒಂದು 'ಉತ್ತಮ ಗುಣಮಟ್ಟದ ಅಭಿವೃದ್ಧಿ ಮಾದರಿ'ಯನ್ನು ಸೂಚಿಸಿದೆ ಹಾಗೂ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ನಿಟ್ಟಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ಹೂಡಿಕೆ ಮಾಡುವುದರ ಮೂಲಕ ಉತ್ಪಾದನೆ ಮತ್ತು ಅಭಿವೃದ್ಧಿ ಪೂರಕ ವಾತಾವರಣ ಸೃಷ್ಟಿಯಿಂದ ಮಾತ್ರ ಸಾಧ್ಯ ಎಂದು ಹಾಗೆಯೇ ಮುಂದುವರೆದು ಪ್ರಾದೇಶಿಕ ಸಮಾನತೆ ತತ್ವವು ಪ್ರತಿಪಾದಿಸುತ್ತದೆ. ಅಸಮತೋಲನವನ್ನು ನಿವಾರಿಸಬೇಕಾದರೆ 'ಸಮತೋಲನ ತತ್ವವನ್ನು' ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂದು ತಿಳಿಸುತ್ತದೆ.

**ಪ್ರಾದೇಶಿಕ ಅಸಮತೋಲನ ಕ್ಷೇತ್ರಗಳು**

ಹೈದರಾಬಾದ್ ಕರ್ನಾಟಕ ಎಷ್ಟು ಪ್ರಮಾಣದ ಪ್ರಾದೇಶಿಕ ಅಸಮತೋಲನವನ್ನು ಹೊಂದಿದೆ ಎಂಬುದನ್ನು ತಿಳಿಯಬೇಕಾದರೆ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದೊಂದಿಗೆ ಹೋಲಿಕೆ ಮಾಡಿ

ನೋಡಿದಾಗ ಸ್ಪಷ್ಟವಾಗಿ ತಿಳಿಯುತ್ತದೆ. ಪ್ರಾದೇಶಿಕ ಅಸಮತೋಲನಕ್ಕೆ ಸಂಬಂಧಿಸಿದಂತೆ ಶಿಕ್ಷಣ, ಸಾರ್ವಜನಿಕ ಆರೋಗ್ಯ. ಮೂಲಭೂತ ಸೌಕರ್ಯಗಳ ಅಭಿವೃದ್ಧಿ. ಪ್ರವಾಸೋದ್ಯಮ ಒಳಗೊಂಡಿದೆ.

**ಪ್ರಾದೇಶಿಕ ಅಸಮತೋಲನೆಗೆ ಸಂಬಂಧಿಸಿದ ಪ್ರಮುಖ ಸಮಿತಿಗಳು ವಿಶೇಷವಾಗಿ**

**ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ಶಿಫಾರಸ್ಸುಗಳ ವಿಶ್ಲೇಷಣೆ**

ಜಗತ್ತಿನ ಅನೇಕ ರಾಷ್ಟ್ರಗಳು ಪ್ರಾದೇಶಿಕ ಅಸಮತೋಲನ ಸಮಸ್ಯೆಯನ್ನು ಎದುರಿಸುತ್ತಿವೆ. ಇದರಿಂದ ಭಾರತವು ಹೊರತಾಗಿಲ್ಲ. ಈ ಸಮಸ್ಯೆಯನ್ನು ಹೋಗಲಾಡಿಸುವ ಸಲುವಾಗಿ, ಕ್ರಿ.ಶ.1960 ರಿಂದ ಕ್ರಿ.ಶ.1996ರ ದಶಕಗಳಲ್ಲಿ ಕೇಂದ್ರ–ರಾಜ್ಯ ಸರಕಾರಗಳು ಯೋಜನಾ ರಚನಾಕಾರರನ್ನು, ಆಡಳಿತಗಾರರನ್ನು, ಮತ್ತು ರಾಜಕಾರಣಿಗಳನ್ನೊಳಗೊಂಡಂತೆ ಸುಮಾರು 11 ಸಮಿತಿಗಳ ರಚನೆಯ ಉಲ್ಲೇಖ ಕಂಡುಬರುತ್ತದೆ. ಅವುಗಳಲ್ಲಿ ಪ್ರಮುಖವಾದ ಸಮಿತಿಗಳೆಂದರೆ

**ಫ್ಯಾಕ್ಟ್ ಫೈಂಡಿಂಗ್ ಸಮಿತಿ.(1954)**

ಕ್ರಿ.ಶ.1954ರಲ್ಲಿ ಮೈಸೂರು ಸರಕಾರವು ಕರ್ನಾಟಕ ರಾಜ್ಯದಲ್ಲಿನ ಹಿಂದುಳಿದ ಜಿಲ್ಲೆಗಳನ್ನು ಅಧ್ಯಯನ ಮಾಡುವ ಸಲುವಾಗಿ ಫ್ಯಾಕ್ಟ್ ಪೈಂಡಿಂಗ್ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ರಾಜ್ಯದಲ್ಲಿನ ಹಿಂದುಳಿದ ಜಿಲ್ಲೆಗಳನ್ನು ವಿಶೇಷವಾಗಿ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳನ್ನು ಗುರುತಿಸಿ, ಇವುಗಳು ಹಿಂದುಳಿದ ಜಿಲ್ಲೆಗಳಾಗಿವೆ ಎಂದು ಸೂಚಿಸಿ, ಇವುಗಳ ಅಭಿವೃದ್ಧಿಗೆ ವಿಶೇಷ ಸವಲತ್ತುಗಳನ್ನು ನೀಡಬೇಕೆಂದು ಶಿಫಾರಸ್ಸು ಮಾಡಿತು. ಶಿಫಾರಸ್ಸು ಮಾಡಿದ ಕ್ಷೇತ್ರಗಳೆಂದರೆ–ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಮಾನವ ಅಭಿವೃದ್ಧಿ ಸೂಚ್ಯಾಂಕ ಮತ್ತು ಮೂಲಭೂತ ಸೌಕರ್ಯಗಳು ಇತ್ಯಾದಿ.

**ಕೈಗಾರಿಕಾ ಅಸಮತೋಲನ ಸಮಿತಿ (1960), ಭಾರತ ಸರ್ಕಾರ**

ಈ ಸಮಿತಿಯು ಭಾರತದಾದ್ಯಂತ 100 ಹಿಂದುಳಿದ ಜಿಲ್ಲೆಗಳನ್ನು ಗುರುತಿಸಿ ಅಂತಹ ಜಿಲ್ಲೆಗಳಲ್ಲಿ ಕೈಗಾರಿಕಾ ನೀತಿಗಳನ್ನು ಹೇಗೆ ಉತ್ತೇಜಿಸಬೇಕೆಂಬ ಶಿಫಾರಸ್ಸು ಮಾಡಿರುತ್ತದೆ.

**ಪಟೇಲ್ ಸಮಿತಿ (1960)**

ಕ್ರಿ.ಶ.1960ರಲ್ಲಿ ಭಾರತ ಸರ್ಕಾರದ ಯೋಜನಾ ಆಯೋಗದಿಂದ ನೇಮಕವಾದ ಈ ಸಮಿತಿಯು ಹಿಂದುಳಿದ ಪ್ರದೇಶಗಳಿಗೆ ಸಂಬಂಧಿಸಿದಂತೆ ಹೊಸ ಅಭಿವೃದ್ಧಿ ಮಾನದಂಡಗಳು ಯಾವವು ಎಂಬುದನ್ನು ಶಿಫಾರಸ್ಸು ಮಾಡಿತು. ಅವುಗಳೆಂದರೆ ಕೈಗಾರಿಕೆ, ಕೃಷಿ, ತೋಟಗಾರಿಕೆ, ಹೂಡಿಕೆ, ಮಾನವ ಅಭಿವೃದ್ಧಿ ಸೂಚ್ಯಂಕ, ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಇತ್ಯಾದಿಗಳು.

**ಯೋಜನಾ ಅಧ್ಯಯನ ಆಯೋಗ (1966), ಭಾರತ ಸರ್ಕಾರ**

ಈ ಸಮಿತಿಯು ಹಿಂದುಳಿದ ಪ್ರದೇಶಗಳನ್ನು 5 ವರ್ಗಗಳನ್ನಾಗಿ ವಿಂಗಡಿಸಿತು. ಅವುಗಳೆಂದರೆ (ಎ) ಮರುಭೂಮಿ ಪ್ರದೇಶ (ಬಿ) ಬೆಟ್ಟ–ಗುಡ್ಡಗಳ ಪ್ರದೇಶ (ಸಿ) ಬಯಲು ಸೀಮೆ ಪ್ರದೇಶ, (ಡಿ) ಬುಡಕಟ್ಟು ಪ್ರದೇಶ (ಇ) ಹೆಚ್ಚು ಜನಸಾಂದ್ರ ಪ್ರದೇಶ, ಈ ಪ್ರದೇಶಗಳ ಅಭಿವೃದ್ಧಿಯ ಸಲುವಾಗಿ ವಿಶೇಷ

ಗಮನ ಹರಿಸಬೇಕೆಂದು ಕೇಂದ್ರ ಸರ್ಕಾರವು ದೇಶದ ಹಲವು ರಾಜ್ಯಗಳಿಗೆ ಶಿಫಾರಸ್ಸು ಮಾಡಿ ವರದಿ ಕೇಳಿತು.

**ಪಾಂಡೆ ಸಮಿತಿ, ಭಾರತ ಸರ್ಕಾರ (1968)**

ಕೈಗಾರಿಕಾ ಕ್ಷೇತ್ರಗಳಲ್ಲಿ ಹಿಂದುಳಿದ ಜಿಲ್ಲೆಗಳನ್ನು ಕೈಗಾರಿಕಾ ಅಭಿವೃದ್ಧಿ ದೃಷ್ಟಿಯಿಂದ ಉತ್ತೇಜನಗೊಳಿಸುವುದು ಹೇಗೆ ಮತ್ತು ಆಯ್ದ ಹಿಂದುಳಿದ ಜಿಲ್ಲೆಗಳಲ್ಲಿ ಪ್ರಾದೇಶಿಕ ಅಸಮತೋಲನೆಯನ್ನು ಹೇಗೆ ನಿರ್ಮೂಲನೆಗೊಳಿಸಬೇಕು ಅದಕ್ಕೆ ಯಾವ ಯಾವ ತಂತ್ರಗಳನ್ನು ಬಳಸಬೇಕು ಎಂಬುದನ್ನು ಶಿಫಾರಸ್ಸು ಮಾಡಿತು.

**ವಾಂಚೊ ಸಮಿತಿ (1968), ಭಾರತ ಸರ್ಕಾರ**

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಿಂದ ನೇಮಕವಾದ ಈ ಸಮಿತಿಯು ಹಿಂದುಳಿದ ಪ್ರದೇಶಗಳಲ್ಲಿ ಬಂಡವಾಳ ಹೂಡುವಂತೆ, ಕೈಗಾರಿಕೆಗಳಿಗೆ ಉತ್ತೇಜನ ನೀಡುವಂತೆ ಮತ್ತು ಭೌತಿಕ–ಹಣಕಾಸಿನ ಪ್ಯಾಕೇಜ್‌ಗಳನ್ನು ಘೋಷಿಸುವಂತೆ ಶಿಫಾರಸ್ಸು ಮಾಡಿತು.

**ಸುಖಮೆಯ ಚಕ್ರವರ್ತಿ ಸಮಿತಿ (1978), ಭಾರತ ಸರ್ಕಾರ.**

ಭಾರತ ಸರ್ಕಾರದಿಂದ ನೇಮಕವಾದ ಈ ಸಮಿತಿಯು, ಆಯ್ದ ಜಿಲ್ಲೆಗಳನ್ನು ಗುರುತಿಸಿ, ಅವುಗಳ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸುವ ಸಲುವಾಗಿ ಪ್ರಮುಖವಾಗಿ 12 ಮಾನದಂಡಗಳನ್ನು ಸೂಚಿಸಿತು. ಅವುಗಳೆಂದರೆ ಜನಸಂಖ್ಯೆ ಸಾಂದ್ರತೆ, ನಗರ ಪ್ರದೇಶದ ಜನಸಂಖ್ಯೆ, ಗ್ರಾಮೀಣ ಪ್ರದೇಶದ ಜನಸಂಖ್ಯೆ, ಕೃಷಿ ಕಾರ್ಮಿಕರು, ಭೌಗೋಳಿಕ ಪ್ರದೇಶ, ಕೃಷಿ ಭೂಮಿ, ಕೈಗಾರಿಕೆಗಳ ಸ್ಥಾಪನೆ, ಕೃಷಿ ಮಾರುಕಟ್ಟೆ ವ್ಯವಹಾರ, ಸಾಕ್ಷರತೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ವಿದ್ಯುತ್ ಸೌಕರ್ಯ ಹೊಂದದ ಹಳ್ಳಿಗಳು.

**ರಾಷ್ಟ್ರೀಯ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಸಮಿತಿ (1978), ಭಾರತ ಸರ್ಕಾರ.**

ಭಾರತ ಸರ್ಕಾರದಿಂದ ನೇಮಕವಾದ ಈ ಸಮಿತಿಯ ನೇತೃತ್ವವನ್ನು ಅಂದಿನ ಯೋಜನಾ ಆಯೋಗದ ಸದಸ್ಯರಾದ ಶ್ರೀ.ಬಿ.ಶಿವರಾಮನ್ ಅವರು ವಹಿಸಿದ್ದರು. ಈ ಸಮಿತಿಯು ಹಿಂದುಳಿದ ಪ್ರದೇಶಗಳನ್ನು ಗುರುತಿಸಿ ವರ್ಗೀಕರಿಸಿತು. ಅವುಗಳೆಂದರೆ ಬಯಲು ಸೀಮೆ, ಮರುಭೂಮಿ ಪ್ರದೇಶ, ಬುಡಕಟ್ಟು ಪ್ರದೇಶ, ಬೆಟ್ಟ–ಗುಡ್ಡಗಳ ಪ್ರದೇಶ ಮತ್ತು ಪ್ರವಾಹ ಪೀಡಿತ. ಪ್ರದೇಶಗಳೆಂದು ಗುರುತಿಸಿದ ಪ್ರದೇಶಗಳಿಗೆ ವಿಶೇಷ ಅನುದಾನ ನೀಡಿ, ಅಭಿವೃದ್ಧಿಗೊಳಿಸಬೇಕೆಂದು ಶಿಫಾರಸ್ಸು ಮಾಡಿತು.

**ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಸಮಿತಿ (1983), ಭಾರತ ಸರ್ಕಾರ.**

ಶ್ರೀ.ಐ.ಜಿ.ಪಟೇಲರ ನೇತೃತ್ವದ ಈ ಸಮಿತಿಯು ಹಿಂದುಳಿದ 100 ಜಿಲ್ಲೆಗಳನ್ನು ಗುರುತಿಸಿ ಅವುಗಳ ಅಭಿವೃದ್ಧಿಗೆ ವಿಶೇಷ ಮಾನದಂಡಗಳನ್ನು ರೂಪಿಸಿತು.

**ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿ (1992), ಕರ್ನಾಟಕ ಸರ್ಕಾರ.**

ಕರ್ನಾಟಕ ಸರ್ಕಾರದ ಅಂದಿನ ಶಾಸಕರಾಗಿದ್ದ ಶ್ರೀ. ಧರಮ್‌ಸಿಂಗ್‌ರವರ ನೇತೃತ್ವದಲ್ಲಿ ಈ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಅಂತರ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ 22 ಸೂಚ್ಯಾಂಕಗಳನ್ನು ಗುರುತಿಸಿ ಇವುಗಳ ಅನುಷ್ಠಾನಕ್ಕೆ ಶಿಫಾರಸ್ಸು ಮಾಡಿತು. ಆ 22 ಸೂಚ್ಯಾಂಕಗಳೆಂದರೆ ಜನಸಂಖ್ಯೆ, ಜನಸಂಖ್ಯೆ ಗಾತ್ರ, ಲಿಂಗಾನುಪಾತ, ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಉನ್ನತ ಶಿಕ್ಷಣ, ಸಾಕ್ಷರತೆ, ಜನಸಾಂದ್ರತೆ, ಗ್ರಾಮೀಣ ಅಭಿವೃದ್ಧಿ, ಮೂಲಭೂತ ಸೌಕರ್ಯಗಳು, ಸಾರಿಗೆ, ಕೈಗಾರಿಕೆ, ಬ್ಯಾಂಕಿಂಗ್ ಸೇವೆ, ಆರೋಗ್ಯ, ಕೃಷಿ, ತೋಟಗಾರಿಕೆ, ಮಾನವ ಅಭಿವೃದ್ಧಿ ಸೂಚ್ಯಾಂಕ, ತಲಾದಾಯ, ಭೂಹಿಡುವಳಿ ಮಾದರಿ, ಗ್ರಾಮೀಣ ಜನಸಂಖ್ಯೆ ಮತ್ತು ನಗರ ಜನಸಂಖ್ಯೆ

**ಶರ್ಮಾ ಸಮಿತಿ (1966), ಭಾರತ ಸರ್ಕಾರ**

ಶ್ರೀ.ಇ.ಎ.ಎಸ್.ಶರ್ಮಾ ನೇತೃತ್ವದ ಈ ಸಮಿತಿಯು ಕ್ರಿ.ಶ.1996ರಲ್ಲಿ ನೇಮಕವಾಗಿ, ನವಂಬರ್ ಕ್ರಿ.ಶ.1997ರಲ್ಲಿ ತನ್ನ ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಿತು. ಈ ಸಮಿತಿಯು ಕರ್ನಾಟಕದ ಬೀದರ್ ಸೇರಿದಂತೆ ಒಟ್ಟು 100 ಹಿಂದುಳಿದ ಜಿಲ್ಲೆಗಳನ್ನು ಪಟ್ಟಿ ಮಾಡಿ ವರದಿ ಸಲ್ಲಿಸಿದೆ. ಹೀಗೆ ಈ ಮೇಲ್ಕಂಡ ಸಮಿತಿಗಳು ಮಾಡಿದ ಶಿಫಾರಸ್ಸುಗಳನ್ನು ಸರ್ಕಾರಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರೆ ಪೂರ್ಣ ಅಥವಾ ಭಾಗಶಃವಾದರೂ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಬಹುದಾಗಿದೆ.

**ಡಾ.ಡಿ.ಎಂ. ನಂಜುಡಪ್ಪ ವರದಿ,**

ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯು ತೀವ್ರವಾಗಿರುವುದನ್ನು ಅನೇಕ ಅಧ್ಯಯನಗಳು ಹಾಗೂ ವರದಿಗಳು ದೃಢಪಡಿಸಿವೆ. ಈ ದಿಶೆಯಲ್ಲಿ ಸರ್ಕಾರವು 2000ದಲ್ಲಿ ನೇಮಿಸಿದ್ದ ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯು ವಿಸ್ತೃತ ರೂಪದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಮಾಪನ ಮಾಡಿ ಅದರ ತೀವ್ರತೆಯನ್ನು ತೋರಿಸಿಕೊಟ್ಟಿತು. ಅದು ಸಮಸ್ಯೆಯನ್ನು ವಿವರವಾಗಿ ಪರಿಶೀಲಿಸಿ 2002ರಲ್ಲಿ ತನ್ನ ಸಾವಿರ ಪುಟಗಳನ್ನು ಮೀರಿದ ಬೃಹತ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಪ್ರಾದೇಶಿಕ ಅಸಮಾನತೆಯನ್ನು ಮಾಪನ ಮಾಡುವ ಉದ್ದೇಶಕ್ಕಾಗಿ ಸಮಿತಿಯು ಐದು ವಲಯಗಳಿಗೆ ಸಂಬಂಧಿಸಿದ 35 ಸೂಚಿಗಳನ್ನು ಒಳಗೊಂಡ 'ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ'ವೆಂಬ ಮಾಪನವನ್ನು ಬಳಸಿತು. ಅದು ರಾಜ್ಯದಲ್ಲಿರುವ 175 ತಾಲೂಕುಗಳ ಪೈಕಿ 114 ತಾಲೂಕುಗಳು ಹಿಂದುಳಿದಿದ್ದಾವೆಂದು ಗುರುತಿಸಿತು, ಅವುಗಳಲ್ಲಿ 39 ಅತ್ಯಂತ ಹಿಂದುಳಿದಿದ್ದಾವೆಂದು, 40 ಅತಿ ಹಿಂದುಳಿದಿದ್ದಾವೆಂದು ಮತ್ತು 15 ಹಿಂದುಳಿದಿದ್ದಾವೆಂದು ವರ್ಗಿಕರಿಸಿತು. 35 ಈ 114ರಲ್ಲಿ 55 ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದರೆ 59 ಉತ್ತರ ಕರ್ನಾಟಕ್ಕೆ ಸೇರಿದ್ದವು, ಆದರ ವರ್ಗಿಕರಿಸಿದ ತಾಲೂಕುಗಳ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ನೋಡಿದರೆ ಕರ್ನಾಟಕದಲ್ಲಿ ಅದು ಎಷ್ಟೊಂದು ಗಂಭೀರವಾಗಿದೆಯೆಂಬುದು ತಿಳಿಯುತ್ತದೆ ಬಹಳ ವಿಶಿಷ್ಟವಾದ ಸಂಗತಿಯೆಂದರೆ ಸಮಿತಿಯು ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆಯು ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಮಡುಗಟ್ಟಿಕೊಂಡಿರುವುದನ್ನು ದೃಢಪಡಿಸಿದೆ.

ಅದು ಗುರುತಿಸಿದ್ದ 114 ಹಿಂದುಳಿದ ತಾಲೂಕುಗಳ ಅಭಿವೃದ್ಧಿಗಾಗಿ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯೊಂದನ್ನು ಶಿಫಾರಸ್ಸು ಮಾಡಿತ್ತು. ಇದರ ಜೊತೆಗೆ ಅದು ಅನೇಕ ಇತರ ಶಿಫಾರಸ್ಸುಗಳನ್ನು ಮಾಡಿತ್ತು. ಆದರೆ, ಸರ್ಕಾರಗಳು ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯನ್ನು ಕೇವಲ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗೆ ಮೊಟಕುಗೊಳಿಸಿ ಅದರ ಉಳಿದ ಶಿಫಾರಸ್ಸುಗಳನ್ನು ಮೂಲೆಗುಂಪು ಮಾಡಿದೆ. ಉದಾಹರಣೆಗೆ ಸರ್ಕಾರವು ಮೊದಲು ತನ್ನ ಪ್ರಾದೇಶಿಕ ಅಭಿವೃದ್ಧಿ ನೀತಿಯನ್ನು ಪ್ರಕಟಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿತ್ತು (ಅಂತಿಮ ವರದಿ : ಪುಟ : 863), ಇದು ಸಮಿತಿಯ ಮೊಟ್ಟಮೊದಲನೆಯ ಶಿಫಾರಸ್ಸಾಗಿದೆ. ಇದರ ಬಗ್ಗೆ ಯಾವ ಸರ್ಕಾರವಾಗಲಿ ಅಥವಾ ಮಂತ್ರಿ ಮಹೋದಯರಾಗಲಿ ಇದುವರೆಗೂ ಚಕಾರವೆತ್ತಿಲ್ಲ. ಅಂತಹ ನೀತಿಯೊಂದರ ಅಗತ್ಯವನ್ನು ಅಸಮಾನತೆಯನ್ನು ಮನಗಂಡಿಲ್ಲವೆಂಬುದು ಅವುಗಳು ಪ್ರಾದೇಶಿಕ ಪರಿಗಣಿಸಿಲ್ಲವೆಂಬುದಕ್ಕೆ ಅಪ್ಪಟ ಸಾಕ್ಷಿಯಾಗಿದೆ. ಸಮಿತಿಯು ತನ್ನ ವರದಿಯನ್ನು ಸಲ್ಲಿಸಿ ಆರು ವರ್ಷಗಳು ಕಳೆದರೂ ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯನ್ನು ಸದಾ ಜಪಿಸುವ ಸರ್ಕಾರಕ್ಕೆ 'ಪ್ರಾದೇಶಿಕ ಅಭಿವೃದ್ಧಿ ನೀತಿ' ಯೊಂದನ್ನು ಪ್ರಕಟಿಸಬೇಕೆಂಬ ಅರಿವು ಉಂಟಾಗಿಲ್ಲ, ಈ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಮೇಲುಸ್ತುವಾರಿ ನಡೆಸಲು 2008–09ರಲ್ಲಿ ಶ್ರೀ ಶಶೀಲ್ ನಮೋಶಿ ಅವರನ್ನು (ಕ್ಯಾಬಿನೆಟ್ ಸಚಿವ ಸ್ಥಾನಮಾನ) ಅದರ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಈ ಸಮಿತಿ ಕೂಡ ಪ್ರಾದೇಶಿಕ ಅಭಿವೃದ್ಧಿ ನೀತಿಯ ಅಗತ್ಯದ ಬಗ್ಗೆ ಮನಗಾಣಲಿಲ್ಲ. ಇದರ ಕಾರ್ಯವೈಖರಿ ಬಗ್ಗೆ ಮುಂದೆ ಚರ್ಚಿಸಲಾಗಿದೆ.

ರಾಜ್ಯದ ಒಟ್ಟು 39 ಅತ್ಯಂತ ಹಿಂದುಳಿದ ತಾಲೂಕುಗಳ ಪೈಕಿ ಅಂದರೆ ಶೇ 53.85 ರಷ್ಟು ಗುಲ್ಬರ್ಗಾ ವಿಭಾಗಕ್ಕೆ ಸೇರಿವೆ. ರಾಜ್ಯದ 61 ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲೂಕುಗಳಲ್ಲಿ ಗುಲಬರ್ಗಾ ವಿಭಾಗಕ್ಕೆ ಸೇರಿದ ತಾಲೂಕುಗಳ ಸಂಖ್ಯೆ ಕೇವಲ ಮೂರು (ಶೇ 4.92), ಗುಲಬರ್ಗಾ ವಿಭಾಗಕ್ಕೆ ಸೇರಿದ ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ಎಲ್ಲ ತಾಲೂಕುಗಳು ಹಿಂದುಳಿದಿವೆ. ಈ ವಿಭಾಗದಲ್ಲಿನ ಒಟ್ಟು 31 ತಾಲೂಕುಗಳ ಪೈಕಿ 28 (ಶೇ 90.32) ಹಿಂದುಳಿದ ತಾಲೂಕುಗಳಾಗಿವೆ. ಅಂದರೆ ಈ ವಿಭಾಗದಲ್ಲಿನ ಒಟ್ಟು ತಾಲೂಕುಗಳಲ್ಲಿ ಶೇ90.32ರಷ್ಟು ತಾಲೂಕುಗಳು ಹಿಂದುಳಿದಿವೆ. ಇದಕ್ಕೆ ಪ್ರತಿಯಾಗಿ ಮೈಸೂರು ವಿಭಾಗದಲ್ಲಿನ ಒಟ್ಟು ತಾಲೂಕುಗಳಲ್ಲಿ ಹಿಂದುಳಿದ ತಾಲೂಕುಗಳ ಪ್ರಮಾಣ ಕೇವಲ ಶೇ 50(22 ತಾಲ್ಲೂಕು ಉಡುಪಿ, ದಕ್ಷಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿನ ಎಲ್ಲ ತಾಲೂಕುಗಳು(c) ಸಾಪೇಕ್ಷವಾಗಿ ಮುಂದುವರಿದ ಸ್ಥಿತಿಯಲ್ಲಿವೆ. ಆದರ ಉ.ಕ.ಪ್ರದೇಶದ ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ವಿಜಾಪುರ ಜಿಲ್ಲೆಗಳ ಎಲ್ಲ ತಾಲೂಕುಗಳು(24) ಹಿಂದುಳಿದ ಸ್ಥಿತಿಯಲ್ಲಿವೆ. ಅಭಿವೃದ್ಧಿ ಸಂಬಂಧಿ ಅಸಮಾನತೆಯ ಪ್ರಾದೇಶಿಕ ಸ್ವರೂಪವು ಇದರಿಂದ ಸ್ಪಷ್ಟವಾಗುತ್ತದೆ. ಅಭಿವೃದ್ಧಿಯು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ನೆಲೆಗೊಂಡಿದ್ದರೆ ದುಸ್ಥಿತಿಯು ಉತ್ತರ ಕರ್ನಾಟಕದಲ್ಲಿ ಮಡುಗಟ್ಟಿಕೊಂಡಿರುವುದನ್ನು ವರದಿಯು ಅತ್ಯಂತ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

ನೀರಾವರಿ ಇಲ್ಲದ ಈ ತಾಲೂಕುಗಳಲ್ಲಿ ಶೇ.13ರಷ್ಟು ಭೂಮಿಯಲ್ಲಿ ಮಾತ್ರ ಬಿತ್ತನೆಯಾಗುತ್ತಿತ್ತು. ಬೆಳೆಯ ಇಳುವರಿ ಶೇ.10ರಷ್ಟನ್ನೂ ದಾಟುತ್ತಿರಲಿಲ್ಲ. ವಾಣಿಜ್ಯ ಬೆಳೆಯ ಪ್ರಮಾಣ ಶೇ9ರ ಒಳಗಿತ್ತು. ಬಿತ್ತನೆಯಾದ

ಭೂಮಿಯ ಶೇ.10 ರಷ್ಟು ಭಾಗಕ್ಕೆ ಮಾತ್ರ ಹಾಕಲು ಸಾಕಾಗುವಷ್ಟು ರಸಗೊಬ್ಬರವನ್ನು ಪೂರೈಸಲಾಗುತ್ತಿತ್ತು. ಒಂದು ಲಕ್ಷ ಜನರಿಗೆ ಕೇವಲ 14 ಟ್ರ್ಯಾಕ್ಟರ್‌ಗಳಿರುತ್ತಿದ್ದವು. ಒಂದು ಲಕ್ಷ ಜನರಿಗೆ 19 ಬ್ಯಾಂಕ್‌ಗಳು ಹಾಗೂ 11 ಅಂಚೆ ಕಚೇರಿಗಳಿದ್ದವು. ಹತ್ತು ಸಾವಿರ ಜನರಿಗೆ 15 ಸರ್ಕಾರಿ ಆಸ್ಪತ್ರೆಗಳು, 16 ಜನ ವೈದ್ಯರು, 18 ಶಾಲೆಗಳು ಮತ್ತು 14 ಜನ ಶಿಕ್ಷಕರಿದ್ದರು. ಕೈಗಾರಿಕೆಯಲ್ಲಿ ಶೇ.20ರಷ್ಟು ಜನರಿಗೆ ಮಾತ್ರ ಕೆಲಸ ಇತ್ತು. ಶೇ 20ರಷ್ಟು ಮಂದಿ ಮಾತ್ರ ಸ್ವಉದ್ಯೋಗಿಗಳಾಗಿದ್ದರು. ಕೃಷಿ ಮಾರುಕಟ್ಟೆ ಸೌಲಭ್ಯವನ್ನು ಕೇಳುವಂತಿರಲಿಲ್ಲ. ರಸ್ತೆ, ರೈಲ್ವೆ ಸಂಪರ್ಕಗಳ ಸ್ಥಿತಿಯಂತೂ ಶೋಚನಿಯವಾಗಿತ್ತು. ಈ ದುಃಸ್ಥಿತಿಯನ್ನು ಕಣ್ಣಾರೆ ಕಂಡ ನಂಜುಂಡಪ್ಪ ಅವರು 2002ರಲ್ಲಿ ಸಮಗ್ರ ವರದಿಯೊಂದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದರು. ಈ ಭಾಗದ ಜನ–ಜೀವನ ಸುಧಾರಣೆಯಾಗಬೇಕಾದರೆ ಆರಂಭದಲ್ಲಿ ಎರಡು ವರ್ಷ ವರ್ಷಕ್ಕೆ ಎಂಟು ಸಾವಿರದಂತೆ ಒಟ್ಟು 32 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕು. ಅನಂತರ ಎಂಟು ವರ್ಷಗಳ ಅವಧಿಗೆ ವಿಶೇಷವಾಗಿ ಹಣ ಮೀಸಲಿಟ್ಟು ಖರ್ಚು ಮಾಡಬೇಕು ಎಂದು ಶಿಫಾರಸು ಮಾಡಿದರು. ವರದಿ ಸಲ್ಲಿಕೆಯಾದ ಮಾರನೆ ವರ್ಷ ಅಂದರೆ 2003–04ರಲ್ಲೇ ರಾಜ್ಯ ಸರ್ಕಾದ ಬಜೆಟ್ ನಲ್ಲಿ ಯೋಜನಾ ವೆಚ್ಚವೇ 15 ಸಾವಿರ ಕೋಟಿ ಇತ್ತು. ಅಂತದ್ದರಲ್ಲಿ ನಂಜುಂಡಪ್ಪ ವರದಿ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಪ್ರತ್ಯೇಕವಾಗಿ 1 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕು ಎಂದು ಶಿಫಾರಸ್ಸು ಮಾಡಿತ್ತು. ವರದಿ ಅನುಷ್ಠಾನ ಅಸಾಧ್ಯ ಎಂಬ ವಾದವನ್ನು ಅಧಿಕಾರಿಗಳು ಮುಂದಿಟ್ಟಿದ್ದರು. ಆಗಿನ ರೂಪಾಯಿ ಮೌಲ್ಯಕೆ ತಕ್ಕಂತೆ ಹಣದ ಮೊತ್ತವನ್ನು ವರದಿಯಲ್ಲಿ ನಮೂದಿಸಲಾಗಿತ್ತು. ಈಗಿನ ರೂಪಾಯಿ ಮೌಲ್ಯಕ್ಕೆ ಅನುಗುಣವಾಗಿ ಲೆಕ್ಕ ಹಾಕಿದರೆ ಖರ್ಚು ಮಾಡಬೇಕಾದ ಮೊತ್ತ ಮೂರು ಪಟ್ಟು ಹೆಚ್ಚಾಗಲಿದೆ.

ಡಾ.ಡಿ.ಎಂ.ನಂಜುಂಡಪ್ಪ ವರದಿ ಅನ್ವಯ 2007–8 ರಿಂದ 2020 21ರ ವರೆಗೆ ನೀಡಿದ ಅನುದಾನ ಮತ್ತು ವೆಚ್ಚದ ವಿವರ.

2007ರವರೆಗೂ ಯಾವ ಸರ್ಕಾರಗಳು ನಂಜುಂಡಪ್ಪ ವರದಿಯ ಜಾರಿಗೆ ಮುಂದಾಗಲಿಲ್ಲ. ಆನಂತರ ಎಲ್ಲಾ ಸರ್ಕಾರಗಳು ತಮ್ಮ ಆರ್ಥಿಕ ಇತಿ ಮಿತಿಯಲ್ಲಿ 13 ವರ್ಷಗಳಿಂದ ಈವರೆಗೂ ಒಟ್ಟು 36994 ಕೋಟಿ ರೂ.ಗಳನ್ನು ಒದಗಿಸಿವೆ. ಬಹಳ ವರ್ಷ ಧೂಳು ತಿನ್ನುತ್ತಿದ್ದ ನಂಜುಂಡಪ್ಪ ವರದಿಯನ್ನು ಮೊದಲು ಅನುಷ್ಠಾನಕ್ಕೆ ತರಲು ಮುಂದಾಗಿದ್ದ ಬಿ.ಎಸ್.ಯಡಿಯೂರಪ್ಪ, 2007ರಲ್ಲಿ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಅವರು ಮೊದಲ ಬಾರಿಗೆ ನಂಜುಡಪ್ಪ ವರದಿಯ ಅನುಷ್ಠಾನಕ್ಕಾಗಿ ಪ್ರತ್ಯೇಕವಾಗಿ 1571 ಕೋಟಿ ರೂ.ಗಳನ್ನು ಮೀಸಲಿಟ್ಟರು. ಈ ಮೂಲಕ ನಂಜುಂಡಪ್ಪ ವರದಿ ಜಾರಿಗೆ ಚಾಲನೆ ಸಿಕ್ಕಿತು. ಆದರೆ ಒಂದು ವರ್ಷದಲ್ಲೇ ಅವರು ಅಧಿಕಾರ ಕಳೆದುಕೊಂಡರು. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಾಯಿತು. ಅಗ ಲೋಕಸಭೆಯಲ್ಲಿ ರಾಜ್ಯದ ಬಜೆಟ್ ಮಂಡಿಸಿದ ಆಗಿನ ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಮ್ ಅವರು ಪ್ರಾದೇಶಿಕ ಅಸಮಾನತೆ ನಿವಾರಣೆಯನ್ನು ಮರೆಯಲಿಲ್ಲ. 2007ಕ್ಕಿಂತಲೂ ಶೇ.58ರಷ್ಟು ಅನುದಾನವನ್ನು ಹೆಚ್ಚಿಸಿ 2489 ಕೋಟಿ ರೂ.ಗಳನ್ನು ಮೀಸಲಿಟ್ಟರು. ನಂತರ ಚುನಾವಣೆ ನಡೆದು ಅಧಿಕಾರಕ್ಕೆ ಬಂದ ಸರ್ಕಾರದಲ್ಲಿ ಮತ್ತೆ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಹಣಕಾಸು ಖಾತೆಯನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಅವರು ಅಧಿಕಾರದಲ್ಲಿ ಮಂಡಿಸಿದ

ನಾಲ್ಕು ಬಜೆಟ್ ಗಳಿಂದ ಒಟ್ಟು 10776 ಕೋಟಿ ರೂ.ಗಳನ್ನು ನಂಜುಡಪ್ಪ ವರದಿಗಾಗಿ ಮೀಸಲಿಟ್ಟರು, ಇದರಲ್ಲಿ ಖರ್ಚಾಗಿದ್ದು 4605 ಕೋಟಿ ರೂ.ಗಳು ಮಾತ್ರ. ಮುಂದೆ ಡಿ.ವಿ.ಸದಾನಂದಗೌಡ, ಜಗದೀಶ ಶೆಟ್ಟರ್ ಅವರ ಅವಧಿಯಲ್ಲಿನ ಸರ್ಕಾರ ವಿಶೇಷ ಅನುದಾನ ಒದಗಿಸುವ ಪರಿಪಾಠವನ್ನು ಮುಂದುವರೆಸಿ, ಕ್ರಮವಾಗಿ 680 ಮತ್ತು 2925 ಕೋಟಿ ರೂ.ಗಳನ್ನು ನಿಗದಿ ಮಾಡಿದರು. ಐದು ವರ್ಷಗಳಲ್ಲಿ ಒಟ್ಟು 16381 ಕೋಟಿ ರೂ.ಗಳನ್ನು ನೀಡಲಾಗಿದೆ. ಖರ್ಚಾಗಿದ್ದು 10814 ಕೋಟಿ ರೂ.ಗಳು ಮಾತ್ರ.

2013ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು. 2010ರ ಜುಲೈ 12ರಂದು ಮುಖ್ಯಮಂತ್ರಿಯಾಗಿ ಮಂಡಿಸಿದ ಮೊದಲ ಬಜೆಟ್‌ನಲ್ಲಿ ಪ್ರಾದೇಶಿಕ ಅಸಮಾನತೆ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿದರು. ಅದರೆ ಪ್ರತ್ಯೇಕವಾಗಿ ಅನುದಾನವನ್ನು ಮೀಸಲಿಡಲಿಲ್ಲ, ಬದಲಾಗಿ ಹಿಂದಿನ ಸರಕಾರ ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್ ನಲ್ಲಿ ಮೀಸಲಿರಿಸಿದ್ದ 2925 ಕೋಟಿ ರೂ.ಗಳ ಅನುದಾನವನ್ನು ಮುಂದುವರೆಸಿದರು. ನಂತರದ ವರ್ಷದಲ್ಲಿ 225 ಕೋಟಿ ರೂ.ಗಳನ್ನು ಮೀಸಲಿಟ್ಟರು. ಮುಂದಿನ ನಾಲ್ಕು ವರ್ಷಗಳಲ್ಲೂ ಪ್ರತ್ಯೇಕವಾಗಿ ಅನುದಾನ ಕೊಟ್ಟರು. ಸಿದ್ದರಾಮಯ್ಯ ಅವರ ಐದು ಬಜೆಟ್‌ನಲ್ಲಿ ಒಟ್ಟು 116 ಕೋಟಿ ರೂ.ಗಳ ಅನುದಾನವನ್ನು ಮೀಸಲಿಡಲಾಗಿತ್ತು. ಜೊತೆಗೆ ಮಲೆನಾಡು ಅಭಿವೃದ್ಧಿ, ಬಯಲು ಸೀಮೆ ಪ್ರದೇಶಾಭಿವೃದ್ಧಿ, ಹೈದರಾಬಾದ್ ಕರ್ನಾಟಕ (ಹೈ–ಕ) ಅಭಿವೃದ್ಧಿ ಮಂಡಳಿಗೆ ನೂರಾರು ಕೋಟಿ ರೂ.ಗಳ ಪ್ರತ್ಯೇಕ ಅನುದಾನ ನೀಡಿದರು. ಹೈ–ಕ ಭಾಗದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ಸಿಕ್ಕ ನಂತರ ಈ ಭಾಗಕ್ಕೆ ವಿಶೇಷವಾಗಿ ಪ್ರತಿ ವರ್ಷವೂ ಒಂದು ಸಾವಿರ ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗುತ್ತಿದೆ ಡಿ.ಎಂ. ನಂಜುಂಡಪ್ಪ ವರದಿಯ ಅನುಷ್ಠಾನಕ್ಕೆ ಅನುದಾನ ನೀಡುವುದರಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಮುಂದಿದ್ದಾರೆ. 2007–08 ರಲ್ಲಿ ಉಪಮುಖ್ಯಮಂತ್ರಿಯಾಗಿದ್ದಾಗ ಹಾಗೂ 2008–09 ರಿಂದ 2011–12ರ ನಡುವೆ ಮುಖ್ಯಮಂತ್ರಿಯಾಗಿದ್ದಾಗ ಬಿ. ಎಸ್. ವೈ. ಒಟ್ಟು 15,407 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. 2008–09 ರಿಂದ 2013–14ರವರೆಗಿನ ಅವಧಿಯಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದು ಸೇರಿದಂತೆ ಬಿಜೆಪಿ ಸರ್ಕಾರದ ಐದು ವರ್ಷದ ಆಡಳಿತಾವಧಿಯಲ್ಲಿ ಒಟ್ಟು 16,381 ಕೋಟಿ ರೂಪಾಯಿಗಳು ಸಿಕ್ಕಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಐದು ವರ್ಷಗಳ ಆಡಳಿತಾವಧಿಯಲ್ಲಿ ದಕ್ಕಿದ ಒಟ್ಟು ಅನುದಾನ 10,536 ಕೋಟಿ ರೂಪಾಯಿಗಳು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಮಂಡಿಸಿದ ಎರಡು ಬಜೆಟ್ ಗಳಿಂದ ಒಟ್ಟು 6013 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. 2007 ರಿಂದ 13 ವರ್ಷದಲ್ಲಿ ಈವರೆಗೂ 16 ಬಜೆಟ್ ಗಳು ಮಂಡನೆಯಾಗಿದ್ದು, 2020–21ರಲ್ಲಿ 3060 ಕೋಟಿ ರೂ.ಗಳು ಸೇರಿ ನಂಜುಡಪ್ಪ ವರದಿ ಅನುಷ್ಠಾನಕ್ಕೆ ಒಟ್ಟು 4054 ಕೋಟಿ ರೂ.ಗಳನ್ನು ನಿಗದಿ ಮಾಡಲಾಗಿದೆ. ಆದರೆ ಖರ್ಚು ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಆಗಿರಲಿಲ್ಲ. 2017–18ರಲ್ಲಿ ಸಿದ್ದರಾಮಯ್ಯ ಅವರು ನಿರ್ಗಮನದ ವೇಳೆ 85 ಕೋಟಿ ರೂ.ಗಳನ್ನು ನೀಡಿದ್ದರು. ಅದರಲ್ಲಿ ಬಿಡುಗಡೆಯಾಗಿದ್ದು 2546 ಕೋಟಿ ಖರ್ಚಾಗಿದ್ದು 2496.77 ಕೋಟಿ ಶೇ.83.44ರಷ್ಟು 2018–19ರ ಸಾಲಿನಲ್ಲಿ ಬಜೆಟ್ ಮಂಡಿಸಿದ ಕುಮಾರಸ್ವಾಮಿ ಅವರು 3007 ಕೋಟಿ ನಿಗದಿ ಮಾಡಿದ್ದರು. ಪ್ರಾರಂಭಿಕ ಶುಲ್ಕ 552.77 ಕೋಟಿ ಸೇರಿ ಒಟ್ಟು 35256 ಕೋಟಿ ಅನುದಾನ

ಲಭ್ಯವಿತ್ತು. ಅದರಲ್ಲಿ ಬಿಡುಗಡೆಯಾಗಿದ್ದು 3271.11 ಕೋಟಿ, ಖರ್ಚಾಗಿದ್ದು 2957.20 ಕೋಟಿ ಶೇ.83.70ರಷ್ಟು. 2019 20ನೇ ಸಾಲಿನಲ್ಲಿ 3010.12 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ಪ್ರಾರಂಭಿಕ ಶುಲ್ಕ 48.16 ಕೋಟಿ ಸೇರಿ, 3558.07 ಕೋಟಿ ಲಭ್ಯವಿತ್ತು. ಅದರಲ್ಲಿ ಅಡುಗಡೆಯಾಗಿದ್ದು, 2276.77 ಕೋಟಿ, ಖರ್ಚಾಗಿದ್ದು 2064.44 ಕೋಟಿ ಶೇ 58.02 ಕಳೆದ ಮೂರು ವರ್ಷದಲ್ಲಿ ಅಗಡೆಯಾಗಿರುವುದು 1093.88 ಕೋಟಿ ಖರ್ಚಾಗಿರುವುದು. 7518.17 ಕೋಟಿ ಲಭ್ಯವಿದ್ದ 10068.96 ಕೋಟಿಯಲ್ಲಿ 1975.08 ಕೋಟಿ ನಿಗದಿಪಡಿಸಿದ ಅವಧಿಯಲ್ಲಿ ಬಿಡುಗಡೆಯೇ ಆಗಲಿಲ್ಲ. ಇಂದಿನ ಪ್ರಸ್ತುತ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಅರ್ಥಶಾಸ್ತ್ರಜ್ಞ ಪ್ರೊ. ಎಂ.ಗೋವಿಂದರಾವ್ ಸಮಿತಿ ಮಾರ್ಚ 16, 2025 ರಚಿಸಿದ್ದು 2002ರಲ್ಲಿ ವರದಿ ಸಲ್ಲಿಸಿದ್ದ ಡಾ.ಡಿ.ಎಂ. ನಂಜುಂಡಪ್ಪ ಸಮಿತಿ 2007ರಲ್ಲಿ ಸಿಫಾರಸುಗಳ ಅನುಷ್ಠಾನಕ್ಕೆ ಚಾಲನೆ ನೀಡಿದ ನಂತರ ಆಗಿರವ ಬೆಳವಣಿಗೆಯನ್ನು ಮೌಲ್ಯಮಾಪನ ಮಾಡಲು ಈ ಸಮಿತಿಯು ಪ್ರಸ್ತುತ ಅಧ್ಯಯನ ನಡೆಸಿದೆ.

**ನಂಜುಡಪ್ಪ ವರದಿಗೆ ಒದಗಿಸಿರುವ ಒಟ್ಟು ಅನುದಾನ**

| ವರ್ಷ | ಮುಖ್ಯಮಂತ್ರಿಗಳು | ಅನುದಾನ(ಕೋಟಿಗಳಲ್ಲಿ) |
|---|---|---|
| 2007–08 | ಬಿ.ಎಸ್.ಯಡಿಯೂರಪ್ಪ | 1571 |
| 2008–09 | ರಾಜ್ಯಪಾಲರ ಆಡಳಿತ | 2489 |
| 2008–09 | ಬಿ.ಎಸ್.ಯಡಿಯೂರಪ್ಪ | 2547 |
| 2009–10 | ಬಿ.ಎಸ್.ಯಡಿಯೂರಪ್ಪ | 2674 |
| 2010–11 | ಬಿ.ಎಸ್.ಯಡಿಯೂರಪ್ಪ | 2580 |
| 2011–12 | ಬಿ.ಎಸ್.ಯಡಿಯೂರಪ್ಪ | 2975 |
| 2012–13 | ಡಿ.ವಿ.ಸದಾನಂದಗೌಡ | 2680 |
| 2013–14 | ಜಗದೀಶ್ ಶೆಟ್ಟರ್ | 2925 |
| 2013–14 | ಸಿದ್ದರಾಮಯ್ಯ | – |
| 2014–15 | ಸಿದ್ದರಾಮಯ್ಯ | 2259 |
| 2015–16 | ಸಿದ್ದರಾಮಯ್ಯ | 2300 |
| 2016–17 | ಸಿದ್ದರಾಮಯ್ಯ | 3000 |
| 2017–18 | ಸಿದ್ದರಾಮಯ್ಯ | 2977 |
| 2018–19 | ಎಚ್.ಡಿ.ಕುಮಾರಸ್ವಾಮಿ | 3007 |
| 2019–20 | ಎಚ್.ಡಿ.ಕುಮಾರಸ್ವಾಮಿ | 3010 |
| 2020–21 | ಬಿ.ಎಸ್.ಯಡಿಯೂರಪ್ಪ | 3060 |

**ಪರಾಮರ್ಶನ ಗ್ರಂಥಗಳು**


- *ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ.–2002 ಡಾ.ಡಿ.ಎಂ.ನಂಜುಡಪ್ಪ ವರದಿ.* ಕರ್ನಾಟಕ ಸರ್ಕಾರ
- *ಕರ್ನಾಟಕ ಮಾನವ ಅಭಿವೃದ್ಧಿ ವರದಿ–2005 ಮತ್ತು 2022*
- ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನಾ ವರದಿಗಳು
- ಅಜಿತಕುಮಾರಸಿಂಗ್ (1981) ಪ್ರಾದೇಶಿಕ ಅಭಿವೃದ್ಧಿ ಮಾದರಿಗಳ ತುಲನಾತ್ಮಕ ಅಧ್ಯಯನ ಸ್ಟರ್ಲಿಂಗ್ ಪ್ರಕಾಶನ, ನವದೆಹಲಿ.
- ಸರ್ಕಾರ್ ಪರಿಮಳಚಂದ್ರ (1999) ಭಾರತದಲ್ಲಿ ಪ್ರಾಧೇಶಿಕ ತಾರತಮ್ಯ –ಸಮಸ್ಯೆಗಳು ಮತ್ತು ನಿವಾರಣೆ, ಹಿಮಾಲಯ ಪ್ರಕಾಶನ, ಮುಂಬೈ.
- ಲಕ್ಷ್ಮಣ್ ಟಿ.ಕೆ. (1982) ಹಿಂದುಳಿದ ಪ್ರದೇಶದ ಅಭಿವೃದ್ಧಿ ಅದರ ಸಮಸ್ಯೆಗಳು ಮತ್ತು ಸಂಬಂಧಿಸಿದ ಅಂಶಗಳು
- ವೇಣುಗೋಪಾಲ್.ಕೆ.ಆರ್. (2018), ಭಾರತದ ಆರ್ಥಿಕತೆ–ಅಸಮತೋಲನ ಮತ್ತು ಪ್ರಗತಿ, ಐ.ಕೆ.ಅಂತರಾಷ್ಟ್ರೀಯ ಪ್ರಕಾಶನ, ನವದೆಹಲಿ,